**PW_8**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**

ಚಿತ್ರದುರ್ಗ

ಸಿ.ಸಿ. **1649/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಹರೀಶ್ | PW:8 |
| ತಂದೆಯ ಹೆಸರು | - | ಶಿವಕುಮಾರ್ | CW:8 |
| ವಯಸ್ಸು | - | 23 ವರ್ಷ | ಪ್ರಮಾಣ ವಚನ ಬೋದಿಸಿದ |
| ಉದ್ಯೋಗ | - | ಕೂಲಿ ಕೆಲಸ | ದಿ: 21/11/2025 |
| ವಾಸ | - | ಚಿತ್ರದುರ್ಗ | |

**ಮುಖ್ಯ ವಿಚಾರಣೆ: ಮಾನ್ಯ ಎ ಪಿ ಪಿ ರವರಿಂದ:**

1. ಚಾಸಾ.1, 4, 5 ಗೊತ್ತಿರುವುದಿಲ್ಲ. ಆರೋಪಿತರು ಗೊತ್ತಿಲ್ಲ. ಆರೋಪಿತರ ಮಗ ಪವನ ನನಗೆ ಗೊತ್ತು. ಪವನ ನಾನು ಹೂವಿನ ಡೆಕೊರೇಶನ್ ಕೆಲಸ ಮಾಡುತಿದ್ದೆವು. ಈ ಪ್ರಕರಣಕ್ಕೆ ಸಂಬಂದಿಸಿದಂತೆ ಗಲಾಟೆ ಆದಾಗ ನಾನು ಮತ್ತು ಪವನ 14 ಮತ್ತು 15 ನೇ ತಾರೀಖು 4 ನೇ ತಿಂಗಳು 2022 ನೇ ಇಸವಿಯಲ್ಲಿ ಬಳ್ಳಾರಿಗೆ ಹೋಗಿರುತ್ತೇವೆ. ವಾಪಸ್ಸು ನಾವು 15.04.2022 ರಂದು ರಾತ್ರಿ ಬಂದಿರುತ್ತೇವೆ. ನಾನು ಬಂದ ಮೇಲೆ ನನ್ನ ಸ್ನೇಹಿತನಾದ ಪವನನ ಅತ್ತೆ ಪವನನ ಮೇಲೆ ಹಾಗೂ ಅವರ ತಂದೆ ತಾಯಿಯ ಮೇಲೆ ದೂರು ಕೊಟ್ಟಿದ್ದಾರೆ ಎನ್ನುವ ವಿಚಾರ ಗೊತ್ತಾಯಿತು. ಆದರೆ ನಾನು ಮತ್ತು ಪವನ 14 ಮತ್ತು 15 ನೇ ತಾರೀಖು ಬಳ್ಳಾರಿಯಲ್ಲಿ ಕೆಲಸ ಮಾಡಲು ಹೋಗಿರುತ್ತೇವೆ. ಪವನನ ತಂದೆ ತಾಯಿ ಮೇಲೆ ಗಲಾಟೆ ಆದಾಗ ನಾನು ಮತ್ತು ಪವನ ಬಳ್ಳಾರಿಯಲ್ಲಿರುತ್ತೇವೆ ಈ ವಿಚಾರವಾಗಿ ಪೊಲೀಸರು ಕರೆದಾಗ ಪೊಲೀಸರನ್ನು ಖುದ್ದು ನಾನೇ ಈ ಮೇಲೆ ಓದಿದಂತೆ ಹೇಳಿರುತ್ತೇನೆ.

**ಪಾಟೀ ಸವಾಲು ಆರೋಪಿಯ ಪರ ಶ್ರೀ ಬಿ ಕೆ ಎಮ್ ವಕೀಲರಿಂದ:**

2. ನನ್ನ ಸ್ನೇಹಿತನ ತಂದೆ ತಾಯಿ ಗಲಾಟೆ ಆಗಿತ್ತು ಅಂತ ಹೇಳಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಆ ದಿನ ನಾನು ಹೋದಾಗ ಅವರ ತಂದೆ ತಾಯಿ ಗಲಾಟೆ

**PW_8**

ಮಾಡುತಿದ್ದರು ಅಂತ ಹೇಳಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು**
**ಜೆ ಎಂ ಎಫ್ ಸಿ ನ್ಯಾಯಾಧೀಶರು, ಚಿತ್ರದುರ್ಗ**